# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ದೂರವಾಣಿ ಸಂಖ್ಯೆ: 080-22212343 ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

ಸಂಖ್ಯೆ: ಕವಿಪ್ರನಿನಿ/ಕೆಸಿಒ-01/38029/2023-24 | 4872 ದಿನಾಂಕ: 12 MAR 2024

## ಸುತ್ತೋಲೆ

**ವಿಷಯ:** ಅಧಿಕಾರಿ / ನೌಕರರ ನಿವೃತ್ತಿ ಮತ್ತು ಮರಣ ಸವಲತ್ತುಗಳ ಮಂಜೂರಾತಿ/ ಅಧಿಕರಣಕ್ಕಾಗಿ ಮುಂಗಡ ಬೇಬಾಕಿ ದೃಢೀಕರಣ ಪಡೆಯುವ ಬಗ್ಗೆ.

**ಉಲ್ಲೇಖ:** ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)/ ಕೆಸಿಒ-01/ 39738/ 12-13 ದಿನಾಂಕ: 17/11/2012.

******

ಉಲ್ಲೇಖದ ಸುತ್ತೋಲೆ ದಿನಾಂಕ: 17/11/2012 ರಲ್ಲಿ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿರುವ "ಸಿ" ಮತ್ತು "ಡಿ" ಪದವೃಂದದವರ ಪಿಂಚಣಿ ಸವಲತ್ತುಗಳನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಧಿಕರಿಸಲು ಅನುಸರಿಸಬೇಕಾದ ಕ್ರಮಗಳ ಮಾರ್ಗಸೂಚಿಗಳ ಕಂಡಿಕೆ- II & III ರಲ್ಲಿ " ನೌಕರರು ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ಪ್ರಕರಣಗಳಲ್ಲಿ ಮತ್ತು ಸ್ವಯಂ ನಿವೃತ್ತಿ ಪ್ರಕರಣಗಳಲ್ಲಿ ನೌಕರರಿಂದ ನಿಗಮಕ್ಕೆ ಬಾಕಿ ಇರುವ ಮುಂಗಡಗಳ ಮಾಹಿತಿಯನ್ನು ಮುಂಗಡ ಶಾಖೆಯಿಂದ ಪ್ರತ್ಯೇಕವಾಗಿ ಪಡೆದುಕೊಳ್ಳಬೇಕಾಗಿರುತ್ತದೆ" ಎಂದು ತಿಳಿಸಲಾಗಿರುವ ಹಿನ್ನಲೆಯಲ್ಲಿ ವಿಭಾಗ/ ವೃತ್ತ ಹಾಗೂ ಇತರೆ ಕಚೇರಿಗಳಿಂದ ಮುಂಗಡ ಬಾಕಿ ದೃಢೀಕರಣ ಕೋರಲಾಗುತ್ತಿದೆ.

ನಿಗಮದಿಂದ ಸನ್ 2005 ರ ನಂತರ ಬಡ್ಡಿ ಸಹಿತ ಮುಂಗಡಗಳಾದ ಗೃಹ ನಿರ್ಮಾಣ/ ಖರೀದಿ ಮುಂಗಡ/ ಮದುವೆ ಮುಂಗಡ/ ವಾಹನ ಮುಂಗಡ/ ಗಣಕಯಂತ್ರ ಮುಂಗಡಗಳನ್ನು ಮಂಜೂರು ಮಾಡಿರುವುದಿಲ್ಲ. ಆದ್ದರಿಂದ 2005 ರ ನಂತರ ನಿಗಮದ ಸೇವೆಗೆ ನೇಮಕಾತಿ ಹೊಂದಿರುವವರ ಪ್ರಕರಣಗಳಲ್ಲಿ ಸದರಿ ಮುಂಗಡಗಳ ಬಗ್ಗೆ ಬೇಬಾಕಿ ದೃಢೀಕರಣವನ್ನು ಪಡೆಯುವ ಅಗತ್ಯ ಇರುವುದಿಲ್ಲ ಹಾಗೂ 2005 ರ ಪೂರ್ವದಲ್ಲಿ ನೇಮಕಾತಿ ಹೊಂದಿರುವವರ ವಯೋ ನಿವೃತ್ತಿ/ ಸ್ವಯಂ ನಿವೃತ್ತಿ/ ಮರಣ ಸವಲತ್ತುಗಳನ್ನು ಮಂಜೂರು ಮಾಡುವ ಸಲುವಾಗಿ ನಿಗಮದಿಂದ ಮೇಲ್ಕಂಡ ಮುಂಗಡಗಳನ್ನು ಪಡೆದಿರುವ ಕುರಿತು ಸೇವಾ ಪುಸ್ತಕದಲ್ಲಿ ದಾಖಲಿಸಿ ದೃಢೀಕರಿಸಿರುವುದನ್ನು ಪರಿಶೀಲಿಸಿ ಅಂತಹ ಪ್ರಕರಣಗಳಲ್ಲಿ ಮಾತ್ರ ಬೇಬಾಕಿ ಮಾಹಿತಿಯನ್ನು ಮುಂಗಡ ಶಾಖೆಯಿಂದ ಪಡೆದುಕೊಳ್ಳಬಹುದಾಗಿರುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಈ ವ್ಯವಸ್ಥೆಯಿಂದ ಅನಗತ್ಯ ಪತ್ರ ವ್ಯವಹಾರವನ್ನು ಮತ್ತು ಸಮಯ ವ್ಯಯವಾಗುವುದನ್ನೂ ತಡೆಯಬಹುದಾಗಿರುತ್ತದೆ ಎನ್ನುವುದನ್ನು ಗಮನಿಸುವುದು.

4/3/24

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)
ಕವಿಪ್ರನಿನಿ

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.



12/3/24

3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**ಅಧೀಕ್ಷಕ ಇಂಜಿನಿಯರ್ (ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು www.kptcl.com.karnataka.gov.in→eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.**

**ಪ್ರತಿಗಳು ಮಾಹಿತಿಗಾಗಿ (ಜಾಲತಾಣದಲ್ಲಿ ಪ್ರಕಟಿಸಿದೆ)**

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ/ನಿಯಂತ್ರಣಾಧಿಕಾರಿ(ಆಂ.ಪ)/ ಕವಿಪ್ರನಿನಿ/ ಎಸ್ಕಾಂ
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ/ ಉಪ ಲೆಕ್ಕನಿಯಂತ್ರಣಾಧಿಕಾರಿ (ಆಂ.ಪ)/, ಕವಿಪ್ರನಿನಿ/ ಎಸ್ಕಾಂ
3. ಎಲ್ಲಾ ಲೆಕ್ಕಾಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ)/ ಕವಿಪ್ರನಿನಿ/ ಎಸ್ಕಾಂ

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ.ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(ನೋ.ಸಂ.659) ಮತ್ತು ನಿರ್ದೇಶಕರು, ಕವಿಪ್ರನಿನಿ & ವಿಸಕಂಗಳು.
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ & ನಿರ್ದೇಶಕರು, ಕವಿಪ್ರನಿನಿ ಮತ್ತು ವಿಸಕಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್. ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳ ಪ.ಜಾ./ಪ.ಪಂ.ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಮಂ ಪಿಂಚಣಿದಾರರ ಸಂಘ, ಬೆಂಗಳೂರು.